# ಬದುಕು

ಬದುಕೆಂದರೆ
ಅಮ್ಮ ಕಟ್ಟಿಕೊಟ್ಟ ಬುತ್ತಿ ಅಲ್ಲ
ಓಡಿ ಹೋಗಿ ತರುವ
ಮೂಲೆಯಂಗಡಿಯ ತತ್ತಿಯೂ ಅಲ್ಲ!
ನಿನ್ನ ಬಾಯಿಗೆ
ನಿನ್ನದೇ ಅಡುಗೆ
ನೋಡಿ ಕಲಿ ಮಾಡಿ ತಿಳಿ
ಇದು ಕಡೆಯವರೆಗೆ!
ಆದರೆ ನಿನ್ನ ಅಡುಗೆ ನಿನ್ನ
ಬಾಯಿಗಷ್ಟೇ ಎಂದಿಲ್ಲ
ಪಾಲಿಗೆ ಬರುತ್ತಾರೆ
ಕೆಲ ಮಂದಿಯಾದರೂ
ನಿನ್ನವರೇ... ಹುಟ್ಟಿನಿಂದಲೋ
ಕಟ್ಟಿನಿಂದಲೋ ಎಡವಟ್ಟಿನಿಂದಲೋ
ತೇಗಬಹುದು... ರೇಗಬಹುದು
ಎಲ್ಲಕ್ಕೂ ನೀನೇ!
ಸುಟ್ಟದ್ದನ್ನು ಏನೂ
ಮಾಡಲಾಗದಿದ್ದರೂ... ಕೆಟ್ಟದ್ದನ್ನು
ಸರಿಪಡಿಸಬಹುದು... ಕಿವಿಮಾತು
ನೀನೆಲ್ಲೋ ನೋಡುವಾಗ
ಒಂದಿಷ್ಟು ಉಪ್ಪು ಅಥವಾ ಹುಳಿ
ಇಲ್ಲ, ಸೀಸವೂ ಇರಬಹುದು
ಹುಲಿಗೂ ನರಿಗೂ ಇಲ್ಲಿ
ಹಸುವಿನದೇ ಮುಖ!
ಇದೆಲ್ಲಾ ನಿಭಾಯಿಸಿ
ಯಾವುದೋ ಒಂದಡುಗೆ
ನಿನ್ನ ಹೆಸರು ನಿಲ್ಲಿಸಲೂಬಹುದು
ನಿನ್ನ ಬದುಕು ಕಳೆದ ಮೇಲೂ
ನೀನಳಿದ ಮೇಲೂ!




● ತಲಕಾಡು ಶ್ರೀನಿಧಿ